ಆವೇಶ ತಾಪಗಳು ಒಳಗಡೆ ಇರಲಿ. ರೈತರ ಬಗ್ಗೆ ಇವರೊಬ್ಬರಿಗೇ ಕಳಕಳಿಯಿಲ್ಲ ನಮಗೂ ಕಳಕಳಿಯಿದೆ. ಕರ್ನಾಟಕದ ರೈತರು ಇವರೊಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೇನು? ಸರ್ಕಾರಕ್ಕೆ ಕಳಕಳಿಯಿಲ್ಲವೆ? ಶಾರ್ಟ್‌ಟರ್ಮ್ ಲೋನನ್ನು ಮಿಡಿಯಂಟರ್ಮ್ ಲೋನಾಗಿ ಕನ್ವರ್ಟ್ ಮಾಡಿದ್ದಾರೆ. ರೈತರ ಸಾಲವನ್ನು ಮನ್ನಾ ಮಾಡಿದ್ದೇವೆ. ಇಡೀ ರಾಷ್ಟ್ರದಲ್ಲೇ ಯಾರೂ ಸಹ ಇದನ್ನು ಮಾಡಲಿಲ್ಲ. ಇವರು ಇಲ್ಲಿ ಸುಮ್ಮನೆ ಪ್ರಚಾರಕ್ಕೋಸ್ಕರ ಕೂಗಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ ಮಂಜುನಾಥ್‌ರವರೇ ನಿಮಗೆ ಎರಡೂ ಕೈ ಎತ್ತಿ ಮುಗಿಯುತ್ತೇನೆ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಉಪಾಧ್ಯಕ್ಷರೇ.....

ಉಪಾಧ್ಯಕ್ಷರು:- ಅವರು ಈಲ್ಡ್ ಆಗಿಲ್ಲ.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್:- ಈ ರೀತಿ ಆವೇಶದಿಂದ ಭಾಷಣ ಮಾಡುವುದರಿಂದ ಏನೂ ಆಗುವುದಿಲ್ಲ. ಯಾವ ರೀತಿ ಮಾಡಬೇಕು ಎಂದು ಮಾನ್ಯ ಕಂದಾಯ ಮಂತ್ರಿಗಳು ಹೇಳುತ್ತಿದ್ದಾರೆ. ಇವರ ರೋಷ ಹೊರಗಡೆ ಇರಲಿ, ಇಲ್ಲಿ ಅಲ್ಲ. ಇಲ್ಲಿ ಸುಮ್ಮನೆ ಕೂಗಾಡಿ ಪ್ರಚಾರ ಪಡೆಯುವುದು ಬೇಡ.

ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ ಮಂಜುನಾಥರವರೇ, ನಿಮಗೆ ಎರಡೂ ಕೈಯೆತ್ತಿ ಮುಗಿಯುತ್ತೇನೆ.....

(ಗೊಂದಲ. ಧರಣಿ ಕುಳಿತಿದ್ದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮಾತನಾಡತೊಡಗಿದರು.)

ಉಪಾಧ್ಯಕ್ಷರು:- ವೆಲ್‌ನಿಂದ ಮಾತನಾಡಿದ್ದು ಯಾವುದೂ ರೆಕಾರ್ಡ್ ಆಗುವುದಿಲ್ಲ. ಈಗ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಟಿ.ಎಂ. ಮಂಜುನಾಥ್:- ಶ್ರೀ ಯಡಿಯೂರಪ್ಪನವರು ಆಡಬಾರದ ಮಾತುಗಳನ್ನಾಡಿದ್ದಾರೆ. ಅದನ್ನು ತಾವು ತೆಗಿಸಿಹಾಕಬೇಕು.

ಉಪಾಧ್ಯಕ್ಷರು:- ಅವರು ಅಲ್ಲಿಂದ ಮಾತನಾಡಿದ್ದು ಯಾವುದೂ ರೆಕಾರ್ಡಿಗೆ ಹೋಗಿರುವುದಿಲ್ಲ.

(ಬಿ.ಜೆ.ಪಿ. ಸದಸ್ಯರು ವೆಲ್‌ನಿಂದ ಮಾತನಾಡುತ್ತಲೇ ಇದ್ದರು)

ಶ್ರೀ ಟಿ.ಎಂ. ಮಂಜುನಾಥ್:- ಜನತೆಯನ್ನು ಪ್ರಚೋದನೆ ಮಾಡುತ್ತಿದ್ದೀರಾ? ಯಾವರೀತಿ ಶಾಸನಸಭೆಯಲ್ಲಿ ವರ್ತನೆ ಮಾಡಬೇಕೆಂದು ನಿಮಗೆ ಗೊತ್ತಿಲ್ಲವೇನು?

ಉಪಾಧ್ಯಕ್ಷರು:- ಮಂಜುನಾಥ್‌ರವರೇ, ಸಾಕಷ್ಟು ಮಾತನಾಡಿದ್ದೀರಿ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:- ನಾನು ಅಂದುಕೊಂಡಂತೆ ಚುನಾವಣೆಗೆ ಇನ್ನೂ ಎರಡು ವರ್ಷ ಇದೆ.

ಉಪಾಧ್ಯಕ್ಷರು:- ಚುನಾವಣೆ ಏಕೆ? ನೆರೆಹಾವಳಿ ಬಗ್ಗೆ ಮಾತನಾಡಿ.